–ಮಾನ್ಯ ಸದಸ್ಯರು ಗೈರುಹಾಜರಾಗಿದ್ದರು–

ವೈಸ್ ಚೇರ್ಮನ್ – ಮನ್ಯ ಕ್ಯಾತ್ಸಂದ್ರ ಎನ್ ರಾಜಣ್ಣನವರ ಪ್ರಶ್ನೆ ವರ್ಗಾವಣೆಯಾಗಿದೆ

ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಗೋವಿಂದ ಎಂ ಕಾರಜೋಳ (ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) – ಮಾನ್ಯ ಅಧ್ಯಕ್ಷರೇ, ದಿನಾಂಕ 23 03 2007 ರಂದು 17ನೇ ಪಟ್ಟಿಯ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 14 ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 58 ಪ್ರಶ್ನೆಗಳ ಪೈಕಿ 52 ಉತ್ತರಗಳನ್ನು ಮತ್ತು ದಿನಾಂಕ 26 03 2007 ರಂದು 18ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 121 ಪ್ರಶ್ನೆಗಳ ಪೈಕಿ 103 ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ

ವೈಸ್ ಚೇರ್ಮನ್ – ಮಂಡಿಸಲಾಯಿತು

ಶ್ರೀ ಜೆ ಸಿ ಮಾಧುಸ್ವಾಮಿ – ಸಾರ್, ಈ written answers ಏನು ಇರುತ್ತೆ, ಅದನ್ನು ರೂಮ್‌ಗಳಿಗೆ ಹಾಕಿಸುವ ಹಾಗೆ ಮಾಡಿ ಎಂದು ನಾನು ಹತ್ತು ಸಲ ಹೇಳಿದ್ದೇನೆ ಇದು ಒಂದು ಹೊರೆಯಾಗುತ್ತದೆ ನಮಗೆ ಒಬ್ಬೊಬ್ಬ ಸಹಾಯಕರನ್ನು ಕೊಡಬೇಕಾಗುತ್ತದೆ ಅದನ್ನು ಹೊತ್ತಕೊಂಡು ಹೋಗುವುದಕ್ಕೆ ಅಜೆಂಡಾ ಪ್ಯಾಕೇಜ್ ಜೊತೆ ಅದನ್ನು ರೂಮಿಗೆ ಹಾಕಿಸಿ ಸಾರ್

ವೈಸ್ ಚೇರ್ಮನ್ – ಈಗ ಒಂದು ಮಾಹಿತಿ ಇದೆ ಬಸವರಾಜ ರಾಯರೆಡ್ಡಿಯವರೇ, ನಿಮಗೆ 25 01 2007 ರಂದು ಒಂದು ಪತ್ರ ಹೋಗಿದೆ, 146ನೇಯ ಸಂಖ್ಯೆಯ ಪೀರವನ್ನು ಗೊತ್ತುಪಡಿಸಲಾಗಿದೆ ಎಂದು ಹೇಳಿ ನಿಮಗೆ ಮಾಹಿತಿ ಹೋಗಿದೆ ಈಗ ಸದನವನ್ನು ನಾಳೆ ಬೆಳಿಗ್ಗೆ 10 30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ

(ಸದನವು ರಾತ್ರಿ 8 19 ಗಂಟೆಗೆ ಮುಂದೂಡಲ್ಪಟ್ಟು ಮತ್ತೆ ನಾಳೆ ಬೆಳಿಗ್ಗೆ ಅಂದರೆ ದಿನಾಂಕ 27 03 2007, ಮಂಗಳವಾರ, ಬೆಳಿಗ್ಗೆ 10 30 ಗಂಟೆಗೆ ಸಭೆ ಸೇರಲು ನಿಶ್ಚಯಿಸಿತು)